ರೀತಿಯಲ್ಲಿ ಚಾರ್ಜ್‌ಶೀಟ್‌ನ್ನು ಹಾಕಿಲ್ಲ. ಹೀಗೆ ಇಷ್ಟು ಜನ ಶಾಸಕರುಗಳಿಗೆ ಕೊಟ್ಟ ಆಶ್ವಾಸನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮುರಿದಿದ್ದಾರೆ. ಇದರಿಂದ ನಮಗೆಲ್ಲಾ ನೋವುಂಟಾಗಿದ್ದು ಜನರಲ್ಲಿ ಕೂಡ ನೋವು ಮತ್ತು ಆಕ್ರೋಶದ ವಾತಾವರಣವು ಉಂಟಾಗಿದೆ. ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಈ ಚಾರ್ಜ್‌ಶೀಟ್‌ನ್ನು ತತ್‌ಕ್ಷಣ ದಾಖಲಿಸ ಬೇಕು ಮತ್ತು ಅದನ್ನು ಕೋರ್ಟ್‌ಗೆ ಸಬ್‌ಮಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಅಪರಾಧಿಗಳು ಎಲ್ಲಿ ಇದ್ದರೂ ಅವರನ್ನು ಬಂಧಿಸಿ ಸೂಕ್ತ ಶಿಕ್ಷೆ ವಿಧಿಸಿ ಕಾನೂನು ಕ್ರಮವನ್ನು ಜರುಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಸದಸ್ಯರು ಈ ಕುರಿತು ಮಾನ್ಯ ಮುಖ್ಯಮಂತ್ರಿಯವರು ಭರವಸೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಅವರು ಕೊಟ್ಟಿರತಕ್ಕಂಥ ಭರವಸೆಯಂತೆ ಕ್ರಮ ತೆಗೆದುಕೊಳ್ಳ ಬೇಕೆಂಬ ಬಗ್ಗೆ ಅವರಲ್ಲಿಯೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಭರವಸೆ ಕೊಟ್ಟು ಒಂದು ವಾರದಲ್ಲಿ ಚಾರ್ಜ್ ಶೀಟ್ ಹಾಕುತ್ತೇವೆ ಎಂದು ಹೇಳಿ ಎರಡು ತಿಂಗಳುಗಳಾದರೂ ಕೂಡ ಹಾಕಿಲ್ಲವಾದುದು ಅನ್ಯಾಯವಾಗಿದೆ. ಭರವಸೆಯು ಭರವಸೆಯಾಗಿ ಉಳಿದುಕೊಂಡಿದೆ. ಇದು ಒಂದು ರೀತಿಯಲ್ಲಿ ನಮ್ಮ ಎಲ್ಲಾ ಶಾಸಕರುಗಳಿಗೆ ಆಗಿರುವಂಥ ಅನ್ಯಾಯವೆಂದು ನಾನು ತಿಳಿದುಕೊಂಡಿದ್ದೇನೆ.

Mr. Speaker : You should understand the magnitude or the seriousness.

ಸನ್ಮಾನ್ಯ ಸದಸ್ಯರು ಹೇಳುವುದೇನೆಂದರೆ ಈಗಾಗಲೇ ತಡವಾಗಿದೆ, ಅದನ್ನು ತೀವ್ರಗತಿಯಿಂದ ನೋಡಬೇಕೆಂದು ಹೇಳಿದ್ದಾರೆ. ವಿಳಂಬಕ್ಕೆ ಅವಕಾಶ ಕೊಡಬೇಡಿ ಎಂದು ಕೇಳಿಕೊಂಡಿದ್ದಾರೆ.

ಶ್ರೀ ಸಿ. ಭೈರೇಗೌಡ : ಆಯಿತು.

ix) ಮೈಸೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಪಕ್ಷದ ಸದಸ್ಯರ ಮೇಲೆ ಹಲ್ಲೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ್) : ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಬೆಳಿಗ್ಗೆ 10 ಗಂಟೆಗೆ ಮೈಸೂರು ಮಹಾನಗರಪಾಲಿಕೆಯ ಆಯವ್ಯಯ ಮಂಡನೆ ಇತ್ತು. 1996-97ನೇ ಸಾಲಿನಲ್ಲಿ ಆರೋಗ್ಯ ಇಲಾಖೆಗೆ 9 ಕೋಟಿ ರೂ.ಗಳನ್ನು ನೀಡಲಾಗಿತ್ತು. ಪ್ರಸ್ತುತ ಸಾಲಿನಲ್ಲಿ

ಕೇವಲ 7 ಕೋಟಿ ರೂ.ಗಳನ್ನು ಮಾತ್ರ ಕೊಡಲಾಗಿದೆ ಎನ್ನುವಂಥ ವಿಚಾರವನ್ನು ಅಲ್ಲಿ ಪ್ರಸ್ತಾಪ ಮಾಡಿ ಬಿಜೆಪಿ ಪಕ್ಷದ ಎಲ್ಲಾ ಸದಸ್ಯರು ಸದನದಿಂದ ಹೊರಗಡೆ ಬಂದರು. ಬಂದ ನಂತರ ಮೇಯರ್‌ರವರನ್ನು ಭೇಟಿ ಮಾಡಿ ಅಲ್ಲಿನ ಕಾರ್ಯಕರ್ತರು ಮತ್ತು ನಗರಪಾಲಿಕಾ ಸದಸ್ಯರುಗಳು ಮನವಿಯನ್ನು ಸಲ್ಲಿಸುವುದಕ್ಕಾಗಿ ಹೋಗಲು ಪೋಲಿಸರು ಕೂಡ ಅನುಮತಿಯನ್ನು ಕೊಟ್ಟಿದ್ದರು. ಅದರ ಆಧಾರದ ಮೇಲೆ ಮೇಯರ್‌ರವರನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿ ಹೊರಗೆ ಬರುತ್ತಿರುವ ಸಂದರ್ಭದಲ್ಲಿ ಬಿಜೆಪಿಯ ನಗರಸಭಾಸದಸ್ಯ ಹಾಗೂ ವಿರೋಧಿ ಪಕ್ಷದ ನಾಯಕ ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಂಬುವರ ಮೇಲೆ ಹಲ್ಲೆ ನಡೆದು ಅವರಿಗೆ ಗಾಯಗಳಾಗಿದ್ದು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಪೋಲೀಸರೇ ಅವರನ್ನು ಕರೆದುಕೊಂಡು ಹೋಗಿದ್ದಾರೆ. ಈ ರೀತಿಯಲ್ಲಿ ಮೇಯರ್‌ರವರ ಚೇಂಬರ್‌ನಲ್ಲಿಯೇ ಅವರ ಎದುರಿನಲ್ಲಿಯೇ, ಪೋಲೀಸರ ಹಾಗೂ ಪತ್ರಕರ್ತರ ಎದುರುಗಡೆ ಹಲ್ಲೆಯಾಗಿ ಮಹಿಳಾಸದಸ್ಯರಿಗೂ ಕೂಡ ಪೆಟ್ಟು ಬಿದ್ದಿರುವುದು ಆಗಿದೆ. ನಾವು ಈಗಾಗಲೇ ಮೈಸೂರು ನಗರಪಾಲಿಕೆಯ ಬಗ್ಗೆ ಎರಡು ಭಾರಿ ಪ್ರಸ್ತಾಪ ಮಾಡಿದ್ದೇರೆ. ಇವೊತ್ತು ಅಲ್ಲಿ ಭಯದ ವಾತಾವರಣವು ನಿರ್ಮಾಣವಾಗಿದೆ. ಈ ಕುರಿತು ಸರಕಾರವು ಯಾವ ರೀತಿಯಲ್ಲಿ ಕ್ರಮ ಜರುಗಿಸುತ್ತದೆ ಎಂಬುದನ್ನು ಕೇಳ ಬಯಸುತ್ತೇನೆ.

ಶ್ರೀ ಸಿ. ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ, ಮೈಸೂರು ನಗರಪಾಲಿಕೆಯ ಬಗ್ಗೆ ನಮಗೆ ಇತ್ತೀಚಿನ ದಿನಗಳ ವಿದ್ಯಾಮಾನಗಳನ್ನು ನೋಡಿದಾಗ ಅನ್ನಿಸುತ್ತದೆ, ನಾವೆಲ್ಲರೂ ಸೇರಿ ನಮ್ಮ ಜವಾಬ್ದಾರಿಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅಲ್ಲಿ ಇವೊತ್ತು ಯಾವುದೋ ಒಂದು ರಾಜಕೀಯ ಪಕ್ಷದ ಆಡಳಿತವೇ ನಡೆಯುತ್ತಿದೆಯೋ ಎನ್ನುವಂಥ ಒಂದು ದೃಷ್ಟಿಯ ಹಿನ್ನಲೆಯಲ್ಲಿ ಆಡಳಿತ ನಡೆಯುತ್ತಾ ಇದೆ. ಅಲ್ಲಿ ನಮ್ಮ ಪಕ್ಷದ ಮುಖಂಡರಾಗಿರತಕ್ಕಂಥ ಮಂಜುನಾಥ್‌ರವರ ಮೇಲೆ ಇವೊತ್ತು ಮೇಯರ್‌ರವರ ಎದುರು ಹಲ್ಲೆಯಾಗಿದೆ ಮತ್ತು ನಗರಪಾಲಿಕೆಯಲ್ಲಿ ಇವರು ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಹೋದವರ್ಷ 9 ಕೋಟಿ ಕೊಟ್ಟು ಈ ವರ್ಷದಲ್ಲಿ 7 ಕೋಟಿ ಕೊಟ್ಟಿದ್ದಾರೆಂಬ ಕಾರಣಕ್ಕಾಗಿ ಇದಕ್ಕೆ ನ್ಯಾಯಾಂಗ ತನಿಖೆಗೆ ಒಳಪಡಿಸ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಮದಾಸ್‌ರವರು ಅಲ್ಲಿ ನಡೆದ ಘಟನೆ ಬಗ್ಗೆ ಹೇಳಿದ್ದಾರೆ. ಆದರೆ ಆ ವಿಷಯವು ಸರಕಾರದ ಗಮನಕ್ಕೆ ಬಂದಿಲ್ಲ. ಅಲ್ಲಿಂದ ವರದಿಯನ್ನು ತರಿಸಿ ಅಲ್ಲಿ ಏನಾಗಿದೆ ಎಂದು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ನಿಮಗೆ ಅದು ಸರಿಯಾಗಿ ಅರ್ಥವಾಗಿಲ್ಲವೆಂದು ಕಾಣುತ್ತದೆ. ಅಲ್ಲಿಯ ಕಾರ್ಪೊರೇಟರ್ಸ್ ಮೇಯರ್ ಹತ್ತಿರ ಮನವಿ ಕೊಡಲು ಹೋದಾಗ ಪೋಲೀಸರ ಎಂದುರು ದೌರ್ಜನ್ಯ, ಹೊಡೆದಾಟ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮೈಸೂರು ನಗರಪಾಲಿಕೆಯು ಜನತಾದಳದ ಆಫೀಸ್ ಆಗಿಹೋಗಿದೆ. ಅದುನಮ್ಮ ಜಿಲ್ಲೆಯಾದ ಕಾರಣ ಅಲ್ಲಿನ ಪರಿಸ್ಥಿತಿ ಹೇಗಿದೆ ಎಂದು ನಾವು ನೋಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರು ಅದು ಗಂಭೀರವಾದ ವಿಚಾರವೆಂದು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನೀವು ಅದಕ್ಕೆ ವರದಿ ತರಿಸಿಲ್ಲ. ನಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳುವುದಿಲ್ಲ. ಕ್ಯಾಷುವಲ್ ಆಗಿ ಹಾಗೆ ಹೇಳುವುದಲ್ಲ. ನೀವು ಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಹೀಗೆ ಆದರೆ ಚುನಾಯಿತ ಪ್ರತಿನಿಧಿಗಳು ಕಾರ್ಪೊರೇಷನ್‌ಗೆ ಹೋಗಿ ಹೇಗೆ ಕೆಲಸ ಮಾಡಲು ಸಾಧ್ಯವೆಂದು ನೀವೇ ಹೇಳಿ. ವಿರೋಧ ಪಕ್ಷದ ನಾಯಕರು ಅಲ್ಲಿ ಓಡಾಡುವ ಹಾಗಿಲ್ಲ, ಅವರಿಗೆ ಹೊಡೆಯುತ್ತಾರೆ ಅಂದರೆ ಇದು ಪ್ರಜಾಪ್ರಭುತ್ವಕ್ಕೆ ಗೌರವ ತರತಕ್ಕಂಥ ವಿಚಾರವೇ? ಅವರೂ ಕೂಡ ಮತ ತೆಗೆದುಕೊಂಡು ಗೆದ್ದು ಬಂದವರು. ನೀವು ಕೂಡಲೇ ಕ್ರಮ ಜರುಗಿಸಬೇಕು.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ತಾವುಗಳು ಹೇಳಿದ ಪ್ರಕಾರ ಕೂಡಲೇ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

6.00 ಪಿ.ಎಂ

ಶ್ರೀ ಬಿ. ಎಸ್. ಯಡಿಯೂರಪ್ಪ : ಮೇಯರ್ ಸಮಕ್ಷಮ ಪತ್ರಕರ್ತರ ಸಮಕ್ಷಮ, ಪೋಲೀಸ್‌ರವರು ಮಂಜುನಾಥ್ ಎನ್ನುವವರಿಗೆ ಹೊಡೆದು ಅವರು ಕೆ. ಆರ್. ಆಸ್ಪತ್ರೆಗೆ ಸೇರಿದ್ದಾರೆ ಆಪೋಸಿಷನ್ ಲೀಡರ್‌ಗೆ ಹಲ್ಲೆ ಮಾಡಿದ್ದಾರೆ. ಸಾವಿರಾರು ಜನರು ಒಂದು ಮನವಿಯನ್ನು ಕೊಡುವುದಕ್ಕೆ ಬಂದಾಗ ಪೋಲೀಸ್‌ನವರೇ ಬಂದು ಕೆಲವು ಪ್ರಮುಖರನ್ನು ಒಳಗಡೆಗೆ ಕರೆದುಕೊಂಡು ಹೋಗುತ್ತಾರೆ ಮೇಯರ್ ಹತ್ತಿರ, ಆ ಟೈಮ್‌ನಲ್ಲಿ ಹಲ್ಲೆಯಾಗುತ್ತದೆ. ಕಾರ್ಪೊರೇಟರ್ಸ್‌ಗೆ ಹೊಡೆಯುತ್ತಾರೆ. ಇದು ಆದಾಗ ನಾನು ಹೇಳುವುದು ಸರ್ಕಾರ ಇದೆಯೋ ಎಂದು. ಚುನಾಯಿತ ಪ್ರತಿನಿಧಿಗಳ ಮೇಲೆ ಈ ರೀತಿ ಹಲ್ಲೆ ಮಾಡಿದರೆ ಯಾರಾದರೂ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಅವರ ಮೇಲೆ ಏನಾದರೂ ಕ್ರಿಮಿನಲ್ ಕೇಸನ್ನು ಬುಕ್ ಮಾಡಿದ್ದೀರಾ? ಕಾನೂನು ಪ್ರಕಾರ ಕ್ರಮತೆಗೆದುಕೊಳ್ಳುತ್ತೀರಾ? ಅವರಿಗೆ ರಕ್ಷಣೆ ಕೊಡುತ್ತೀರಾ? ಅಥವಾ ಜನತಾ ದಳದ ಕಛೇರಿ ನಮ್ಮ ಜಹಗೀರ್ ಎಂದುಕೊಂಡು ಹೇಗೆ ಬೇಕಾದರೂ ಹಾಗೆ ನಡೆಸಿಕೊಂಡು ಹೋಗುತ್ತೀರೋ? ಹೆಲ್ತ್

ಕಮೀಟಿಯಲ್ಲಿ ಯಾರನ್ನೋ ಅಧ್ಯಕ್ಷರನ್ನು ಮಾಡಿದರು ಎಂದು ಹೇಳಿದ ತಕ್ಷಣಕ್ಕೆ ಪ್ರತಿಪಕ್ಷದ ನಾಯಕನ ಸ್ಥಾನ ಹೋಗುತ್ತಾ ಸ್ವಾಮಿ? ಅದನ್ನು ತೆಗೆದು ಹಾಕಿದರೆ. ಸರ್ಕಾರದಿಂದ ಮತ್ತೊಂದು ಅಜೆಂಡಾಯನ್ನು ಆ ಮೇಯರ್‌ಗೆ ಕೊಡಿಸಬೇಕಾಯಿತು. ಅಲ್ಲಿ ಬಿಜೆಪಿ ಪ್ರತಿಪಕ್ಷವಾಗಿರುವುದನ್ನು ಸಹಿಸದೆ ನಮಗೆ ಅಲ್ಲಿ ಸದನದ ಒಳಗಡೆ ಕೆಲಸ ಮಾಡುವುದಕ್ಕೆ ಆಗದೇ ಇರುವ ಭಯದ ವಾತಾವರಣ ಕಾರ್ಪೊರೇಟರ್ಸ್ ನಮ್ಮ ಅಧ್ಯಕ್ಷರ ಮೇಲೆ ಹಲ್ಲೆ ಮಾಡುತ್ತಾರೆ. ಪ್ರತಿಪಕ್ಷದ ನಾಯಕನ ಮೇಲೆ ಹಲ್ಲೆ ಮಾಡುತ್ತಾರೆ ಎಂದು ಹೇಳಿದರೆ ಇವತ್ತು ಗೂಂಡಾಗಿರಿ ವ್ಯವಸ್ಥೆಯೇನಾದರೂ ಇದೆಯೇ? ಚಾಕುಚೂರಿ ಸಂಸತಿ ಪ್ರಾರಂಭವಾಗಿದೆಯೋ?

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಇದೇ ಸದನದಲ್ಲಿ ತಮ್ಮ ಕಛೇರಿಯೊಳಗೆ ಎಷ್ಟು ಬಾರಿ ಈ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿಲ್ಲ. ತಾವು ಕಂಡಹಾಗೆ ವಿರೋಧಪಕ್ಷದ ಸ್ಥಾನಮಾನಕ್ಕೆ ಇಲ್ಲಿ ಮಾಡಿದ್ದೇವೆ. ಎರಡನೆಯದು ಎಂಎಲ್‌ಎ ಗಳಿಗೆ ಆಫೀಸ್ ಕೊಡುವ ವಿಚಾರದಲ್ಲಿ ನಾವು ಪ್ರಿವಿಲೇಜ್ ಮೋಷನ್ ಇಲ್ಲಿ ಮೂವ್ ಮಾಡಿದ್ದೆವು. ಮೂರನೆಯದು ಹೆಲ್ತ್ ಕಮಿಟಿ ಛೇರ್ಮನ್‌ರು ಒಂಭತ್ತು ಕೋಟಿಯಿಂದ ಏಳು ಕೋಟಿಗೆ ಇಳಿಸಿ ಎಂದು ಕೇಳಿದ್ದಕ್ಕೋಸ್ಕರವಾಗಿ ಇವತ್ತು ಒಂದು ಗಲಾಟೆಯಾಗಿ ಅವರಿಗೆ ತಲೆಗೆ ಏಟಾಗಿದೆ ಪ್ರಾಣ ಹೋಗುವುದು ಒಂದು ಬಾಕಿ ಇದೆ. ಇದನ್ನು ಯಾರು ಸರಿಪಡಿಸುವುದು? ಯಾವ ರೀತಿ ಸರಿಪಡಿಸುವುದು? ಇವರು ಲೀಗಲ್ ಆಗಿ ಎಲೆಕ್ಟ್ ಆಗಿ ಪ್ರಜಾಪ್ರಭುತ್ವಕ್ಕನುಗುಣವಾಗಿ ಇವರಿಗೆ ಬರಬೇಕಾದ ಸ್ಥಾನಮಾನಗಳನ್ನು ಧಕ್ಕಿಸಿಕೊಳ್ಳುವುದಕ್ಕೆ ಕೇಳಿದರೆ ಅವರನ್ನು ಹೊಡೆಯುವುದಕ್ಕೆ ಹೋದರೆ ಇವರಿಗೆ ರಕ್ಷಣೆ ಕೊಡುವವರು ಯಾರು? ದಯವಿಟ್ಟು ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಾನು ಏನು ಹೇಳುತ್ತೇನೆ, ತಾವು ಇಮ್ಮೀಡಿಯೇಟ್ ಆಗಿ ಸರ್ಕಾರದ ಪರವಾಗಿ Municipal Administration Minister, you get in touch with the police officers there. Also you call that corporation Commissioner. ಕಾರ್ಪೊರೇಷನ್ ಕಮೀಷನರ್ ಯಾರು ಇದ್ದಾರೆ, ಅಲ್ಲಿ ಏನು ಪ್ಯಾಕ್ಟ್ಸ್ ಎಂದು ತಿಳಿದುಕೊಂಡು I think you should set right. This does not bring any grace to the Government, please.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಅಲ್ಲಿನ ಕಾರ್ಪೊರೇಷನ್ ಕಮೀಷನರ್‌ರವರ ಸಂಪರ್ಕ ಬೆಳೆಸಲಿದ್ದಾರೆ.

Mr. Speaker : You should also call the police.

ಶ್ರೀ ಸಿ. ಭೈರೇಗೌಡ : ಪೋಲೀಸರ ಬಗ್ಗೆಯೂ ಕೂಡ ವರದಿಯನ್ನು ತರಿಸಿಕೊಳ್ಳೋಣ.

(x) ಜಂಬಗಿ ಕೆರೆಯಲ್ಲಿ ಮುಳುಗಿ ತೀರಿಹೋದಂಥ ಹುಡುಗನಿಗೆ ಪರಿಹಾರ.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಹೋದ ಸಾರಿ ಅಧಿವೇಶನ ನಡೆದಾಗ ಕಂದಾಯ ಸಚಿವರು ಇರಲಿಲ್ಲ. ಆ ಸಂದರ್ಭದಲ್ಲಿ ಗ್ರಾಮೀಣ ಮತ್ತು ಪಂಚಾಯತ್ ರಾಜ್‌ಸಚಿವರು ಇದರ ಬಗ್ಗೆ ಉತ್ತರ ಕೊಟ್ಟಿದ್ದರು. ಹೋದವರ್ಷ ಅಕ್ಟೋಬರ್‌ನಲ್ಲಿ ಜಂಬಗಿ ಕೆರೆಯಲ್ಲಿ ಮುಳುಗಿ ತೀರಿಹೋದಂಥ ಒಂದು ಹುಡುಗನಿಗೆ ಪರಿಹಾರವನ್ನು ಕೊಡಿಸಬೇಕೆನ್ನುವ ವಿಚಾರವನ್ನು ನಾನು ಎತ್ತಿದ್ದೆ. ಅದಕ್ಕೆ ಕಾರಣ ಬೇರೊಬ್ಬನನ್ನು ಉಳಿಸಲಿಕ್ಕೆ ಹೋಗಿ ತೀರಿ ಕೊಂಡಿದ್ದ. ಅದನ್ನು ತ್ವರಿತವಾಗಿ ಡಿ.ಸಿ.ಗೆ. ನಾನು ನಿರ್ದೇಶನ ಕೊಟ್ಟು ಕೊಡಿಸುತ್ತೇನೆ ಎಂದು ಹೇಳಿ ತಾವು ಒಂದು ವಾಗ್ದಾನ ಕೂಡ ಮಾಡಿದ್ದೀರಿ. ಆದರೆ ಇದುವರೆಗೂ ಕೂಡ ಪರಿಹಾರವನ್ನು ಕೊಡಿಸುವ ವ್ಯವಸ್ಥೆ ಜಿಲ್ಲಾಧಿಕಾರಿಗಳಿಂದ ಆಗಿಲ್ಲ. ದಯಮಾಡಿ ಈ ಸಾರಿ ಯಾದರೂ ತಾವು ಏನು ಹೇಳುತ್ತೀರಿ ಎನ್ನುವುದನ್ನು ತಮ್ಮ ಮೂಲಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ತಮಗೂ ಕೂಡ ಗೊತ್ತಿರುವ ವಿಷಯ

ಶ್ರೀ ಕೆ. ಎಸ್. ಈಶ್ವರಪ್ಪ : ಹೋದ ಸಾರಿ ಕಂದಾಯ ಸಚಿವರನ್ನು ಕೇಳಿದಾಗ ಗ್ರಾಮಾಣಾಭಿವೃದ್ಧಿ ಸಚಿವರು ಉತ್ತರ ಕೊಟ್ಟಿದ್ದರು. ಅವತ್ತೂ ಅವರು ಇರಲಿಲ್ಲ. ಇವತ್ತೂ ಇಲ್ಲ. ಇವರೇ ಮತ್ತೆ ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಾನಂದ ಪಾಟೀಲರು ಎತ್ತಿರುವ ವಿಷಯ ಬಹಳ ಸೂಕ್ತವಾದುದು. ಒಬ್ಬ ಮುಳುಗುತ್ತಿರುವ ಹುಡುಗನನ್ನು ರಕ್ಷಣೆ ಮಾಡಲಿಕ್ಕೆ ಹೋಗಿ ಅವನೂ ಕೂಡ ಪ್ರಾಣ ಕಳೆದುಕೊಂಡಿದ್ದು ಯಾವ ಕಾರಣದಿಂದಲೂ ಏನೂ ಅವರು ಪರಿಹಾರವನ್ನು ಕೊಟ್ಟಿಲ್ಲ ಈ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೆ. ಮುಂದೆ ಏನಾಯಿತು ಎನ್ನುವುದನ್ನು ನಾನು ಪರ್‌ಸ್ಯೂ ಮಾಡಲಿಲ್ಲ. ಆದರೆ ತತ್‌ಕ್ಷಣದಲ್ಲಿಯೇ ನಾನು ಮುಖ್ಯಕಾರ್ಯದರ್ಶಿಗಳವರ ಜೊತೆ ಮಾತನಾಡಿ ಅದರ ವಿಚಾರದಲ್ಲಿ ಪರಿಹಾರವನ್ನು ಕೊಡಿಸುವುದಕ್ಕೆ ಮತ್ತು ಅವರಿಗೆ ಸೂಕ್ತ ನಿರ್ದೇಶನ ಕೊಡಿಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್ : ಜಿಲ್ಲಾಧಿಕಾರಿಗಳ ವರ್ತನೆ ಹೀಗೇಕೆ ಆಗುತ್ತಿದೆ. ಎಂಬುದರ ಬಗ್ಗೆ ತಾವು ವಿಚಾರ ಮಾಡಬೇಕು.

ಅಧ್ಯಕ್ಷರು : ಅವರು ಮಾಡುತ್ತಾರೆ ಬಿಡಿ. ಸೂಚನೆ ಕೊಟ್ಟಿದ್ದೀರಲ್ಲಾ.